(ಸಭೆಯು ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು.—ಮೃತ ಹೊಂದಿದ ಸದಸ್ಯರ ಕುಟುಂಬದವರಿಗೆ ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಿ ಕೊಡಲಾಗುವುದು.

ಪ್ರಶ್ನೋತ್ತರಗಳು

ಚುಕ್ಕಿ ಗುರ್ತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಪ್ರಶ್ನೆ 931 (3000) (ಶ್ರೀ ಆರ್. ರಾಮಯ್ಯ) ಮಾನ್ಯ ಸದಸ್ಯರು ಗೈರುಹಾಜರು.

ಖಾಲಿ ಸ್ಥಾನಗಳಿಗೆ ಶಿಕ್ಷಕರ ನೇಮಕದ ಕುರಿತು

932 (2881) ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಈಗಾಗಲೇ ಖಾಲಿ ಇರುವ ಕಾಲೇಜು, ಜೂನಿಯರ್ ಕಾಲೇಜು, ಹೈಸ್ಕೂಲು ಪ್ರಾಥಮಿಕ ಶಾಲಾ ಶಿಕ್ಷಕರ ಸ್ಥಾನಗಳಿಗೆ ನೇಮಕ ಮಾಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಆ) ಯಾವಾಗ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ?

ಇ) ಈಗಿನ ಅವಶ್ಯಕತೆಯಂತೆ ಈ ನೇಮಕ ಮಾಡಲಾಗುವುದೆ ಅಥವಾ ಹಿಂದಿನ ಕೊರತೆಯ ಆಧಾರದ ಮೇಲೆ ನೇಮಕ ಮಾಡಲಾಗುವುದೇ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಖಾಲಿ ಇರುವ ಕಾಲೇಜು ಪ್ರಾಧ್ಯಾಪಕರ ಮತ್ತು ರೆಗ್ಯೂಲರ್ ರೀಡರ್‌ಗಳ ಹುದ್ದೆಯನ್ನು ಭರ್ತಿ ಮಾಡುವುದನ್ನು ಪರಿಶೀಲಿಸಲಾಗುತ್ತಿದೆ. ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ರಾಜ್ಯ ಮಟ್ಟದ ನೇಮಕಾತಿ ಸಮಿತಿಯಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದು, ನೇಮಕ ಮಾಡಲು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. ಪ್ರೌಢಶಾಲೆ ಸಹ ಶಿಕ್ಷಕರ ಹುದ್ದೆಗಳ ನೇರ ಭರ್ತಿಗಾಗಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ತುಂಬಲು ಜಿಲ್ಲಾ ಆಯ್ಕೆ ಸಮಿತಿಗಳ ಅರ್ಜಿಗಳನ್ನು ಪಡೆದಿವೆ. ಸಂದರ್ಶನಗಳನ್ನು ನಡೆಸಿ ನೇಮಕಾತಿ ನಡೆಸಲು ಸಿದ್ಧತೆ ಮಾಡಲಾಗಿದೆ.

ಆ) ಎಲ್ಲಾ ಹುದ್ದೆಗಳನ್ನು ತುಂಬಲು ತೀವ್ರಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಒಟ್ಟಾರೆ ಅವಶ್ಯಕತೆಯಂತೆ ನೇಮಕ ಮಾಡಲಾಗುವುದು.

ಶ್ರೀ ಜಿ.ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ಸರ್ಕಾರದ ಆಡಳಿತದಲ್ಲಿರುವ ಅನೇಕ ಕಾಲೇಜುಗಳು, ಜೂನಿಯರ್ ಕಾಲೇಜುಗಳು, ಪ್ರೌಢಶಾಲೆಗಳು ಮತ್ತು ಪ್ರಾಥಮಿಕ ಶಾಲೆಗಳಲ್ಲಿ 2-3 ವರ್ಷಗಳಿಂದ ಶಿಕ್ಷಕರ ಹುದ್ದೆಗಳು ಖಾಲಿ ಇದ್ದರೂ ಸಹ ಇನ್ನೂ ಸರ್ಕಾರ ಪರಿಶೀಲನೆ ಮಾಡುತ್ತಿದೆ ಎಂದು ಹೇಳುವುದು ಸರಿಯೇ? ಈ ಕುರಿತು ಅಂತಿಮವಾಗಿ ಯಾವಾಗ ನೇಮಕ ಮಾಡುತ್ತೀರಿ, ಪ್ರಾಥಮಿಕ ಶಾಲೆಗಳನ್ನು ಬಿಟ್ಟು, ಉಳಿದ ಸಂಸ್ಥೆಗಳಲ್ಲಿ ಅಂಶಕಾಲಿಕ ಸಿಬ್ಬಂದಿ ಹಾಕಿಕೊಂಡು ಈಗ ಶಾಲೆಗಳನ್ನು ನಡೆಸಲಾಗುತ್ತಿದೆ. ನನ್ನ ಕ್ಷೇತ್ರವಾದ ಬೈಂದೂರಿನಲ್ಲಿ ಒಂದು ಕಾಲೇಜಿನಲ್ಲಿ ಪ್ರಿನ್ಸಿಪಾಲರು ಮತ್ತು ಲೆಕ್ಚರರ್‌ಗಳನ್ನು ಇಟ್ಟುಕೊಂಡು ಹೀಗೆ ನಡೆಸುತ್ತಿದ್ದಾರೆ. ಮತ್ತು ಕುಶಾಲನಗರದ ಕಾಲೇಜಿನಲ್ಲಿಯೂ ಸಹ ಹೀಗೆ ನಡೆಸುತ್ತಿದ್ದಾರೆ. ಈ ರೀತಿ ಆದರೆ ವಿದ್ಯಾ ಕ್ಷೇತ್ರದ ಗತಿ ಏನು? ಮೂರನೆಯದಾಗಿ ಪ್ರಾಥಮಿಕ ಶಾಲೆಯ ಉಪಾಧ್ಯಾಯರ ನೇಮಕಾತಿ ಬಗ್ಗೆ ಸಂದರ್ಶನ ನಡೆದು, ನೇಮಕಾತಿಗೆ ಎಲ್ಲಾ ಸಿದ್ಧತೆ ಆಗಿದೆ ಎಂದು ಉತ್ತರ ಬಂದಿದೆ. ಇದು ಸತ್ಯಕ್ಕೆ ದೂರವಾದ ಉತ್ತರವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂದರ್ಶನ ನಡೆದು, ನೇಮಕಾತಿಗೆ ಎಲ್ಲ ಸಿದ್ಧತೆ ನಡೆದ ಮೇಲೆ, ನೇಮಕ ಮಾಡಬಾರದೆಂದು ಸರ್ಕಾರದಿಂದ ತಡೆಯಾಜ್ಞೆ ಬಂದಿರುವುದು ನಿಜವಲ್ಲವೇ? ಹೀಗಿರುವಾಗ ನೇಮಕ ಮಾಡುವ ಉದ್ದೇಶ ನಿಮಗೆ ಎಲ್ಲಿದೆ? ತಡೆಯಾಜ್ಞೆಯನ್ನು ಯಾವಾಗ ಪಾಪಸ್ಸು ತೆಗೆದುಕೊಳ್ಳುತ್ತೀರಿ, ಕೊನೇ

ಪ್ರಶ್ನೆಗೆ ಒಟ್ಟಾರೆ ಅವಶ್ಯಕತೆಯಂತೆ ನೇಮಕ ಮಾಡಲಾಗುವುದೆಂದು ತಿಳಿಸಿದ್ದೀರಿ. ಈಗಿನ ಅವಶ್ಯಕತೆಯಂತೆ ನೇಮಕ ಮಾಡಲಾಗುವುದೇ? ಉಪಾಧ್ಯಾಯರ ಮತ್ತು ಪುಕ್ಕಳೆ ದಾಮಾಷಾ ಪ್ರಕಾರ ಅಂದರೆ 1:50ರ ಪ್ರಕಾರ ನೇಮಕ ಮಾಡುತ್ತೀರಾ, 2 ವರ್ಷಗಳ ಹಿಂದಿನ ಕೊರತೆ 150 ಇತ್ತು, ಈಗ 1000ಕ್ಕೆ ಹತ್ತಿರ ಬಂದಿದೆ. ನೀವು ಯಾವ ಆಧಾರದ ಮೇಲೆ ನೇಮಕ ಮಾಡುತ್ತೀರಿ ?

ಅಧ್ಯಕ್ಷರು.—ನೀವು ಭಾಷಣ ಮಾಡುತ್ತೀರಾ, ಅಥವಾ ಪ್ರಶ್ನೆ ಕೇಳುತ್ತೀರಾ.

ಶ್ರೀ ಜಿ.ಎಸ್. ಆಚಾರ್.—ನಾನು ಪ್ರಶ್ನೆ ಕೇಳುತ್ತಿದ್ದೇನೆ. ಒಟ್ಟಾರೆ ಅವಶ್ಯಕತೆಗೆ ಬೇಕಾದ ಹುದ್ದೆಯನ್ನು ಯಾವಾಗ ಮಂಜೂರು ಮಾಡಲಾಗುತ್ತದೆಂಬುದನ್ನು ತಿಳಿಸಿ.

ಶ್ರೀ ಎಂ. ಚಂದ್ರಶೇಖರ್.—ಪ್ರಥಮ ದರ್ಜೆ ಕಾಲೇಜಿನಲ್ಲಿ ಸುಮಾರು 1872 ಉಪನ್ಯಾಸಕರ ಹುದ್ದೆಗಳು ಖಾಲಿ ಇದ್ದು, ಅದರಲ್ಲಿ 586 ರೀಡರ್ ಹುದ್ದೆಗಳಿಗೆ ಬಡ್ತಿ ಕೊಟ್ಟಿರುವ ಕಾರಣ ಆ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸುಮಾರು 123 ಹುದ್ದೆಗೆ ನೇರವಾಗಿ ರೀಡರ್ ಆಗಿ ನೇಮಕ ಮಾಡಲಾಗಿದೆ. 1409 ಹುದ್ದೆಗಳಲ್ಲಿ ಹಾಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಖಾಯಂ ಮಾಡುವುದಕ್ಕೆ ವಿಳಂಬವಾಗಿರಬಹುದು. ಒಟ್ಟು 1872 ಹುದ್ದೆಗಳಲ್ಲಿ 1400 ಹುದ್ದೆಗಳನ್ನು ಈಗ ತುಂಬಿದೆ. ಉಳಿದ ಹುದ್ದೆಗಳನ್ನು ಈಗ ತುಂಬಿದೆ. ಉಳಿದ ಹುದ್ದೆಗಳನ್ನು ತುಂಬಲಿಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆ. ಪ್ರಾಥಮಿಕ ಶಾಲೆಗಳಿಗೆ ಸಂಬಂಧಪಟ್ಟಹಾಗೆ ಮಾನ್ಯ ಸದಸ್ಯರು ಹೇಳಿರುವುದು ನಿಜ. ಶಿಕ್ಷಕರ ನೇಮಕಾತಿಗೆ ಆಜ್ಞೆಯನ್ನು ಹೊರಡಿಸಲಾಗಿತ್ತು, ಈ ಮಧ್ಯೆ ಸರ್ಕಾರದ ಮುಂದೆ ಒಂದು ಪ್ರಶ್ನೆ ಬಂತು. ಟಿ.ಸಿ.ಹೆಚ್. ಮಾಡಿದಂತಹ ವಿದ್ಯಾರ್ಥಿಗಳು 1983ರ ಆಜ್ಞೆಯ ಪ್ರಕಾರ ಅವರ ವಯಸ್ಸನ್ನು ಹೆಚ್ಚಿದರೂ ಕೂಡ ನೇಮಕ ಮಾಡುವುದಕ್ಕೆ ಅವಕಾಶ ಇತ್ತು. ಈಗಿನ ಆಜ್ಞೆಯಲ್ಲಿ ಅದನ್ನು ತೆಗೆದುಹಾಕಲಾಗಿದೆ. ಅದರ ಬಗ್ಗೆ ಪ್ರತಿಭಟನೆ ಮತ್ತು ಒತ್ತಡಗಳು ಬಂದಕಾರಣ ಸರ್ಕಾರ ಪರಿಶೀಲನೆ ಮಾಡಿ ಇವತ್ತು ಟಿ.ಸಿ.ಹೆಚ್. ಮಾಡಿದ್ದು ವಯಸ್ಸಾದವರಿಗೂ ಕೂಡ ಶೇಕಡ 50ರಷ್ಟು ಹುದ್ದೆಗಳನ್ನು ಕಾಯ್ದಿರಿಸಿ ಉಳಿದ 50ರಷ್ಟು ಹುದ್ದೆಗಳನ್ನು ನೇಮಕ ಮಾಡಲು ಈಗಾಗಲೇ ಜಿಲ್ಲಾ ಮಟ್ಟದ ಸಮಿತಿಯವರು ಅರ್ಜಿಗಳನ್ನು ಕರೆದಿದ್ದಾರೆ. ಈ ಬಗ್ಗೆ ಆಜ್ಞೆ ಕೂಡ ಸರ್ಕಾರದಿಂದ ಹೋಗಿದೆ.

ಗಂಗಾವಳಿ ಮತ್ತು ಅಘನಾಶಿನಿ ನದಿಗಳಿಗೆ ಮಿನಿ ಎಲ್. ಸಿ. ಟಿ. ಗಳ ಅಗತ್ಯತೆ

೯೩೩. (೨೮೪೪) ಶ್ರೀ ಎನ್. ಹೆಚ್. ಗೌಡ (ಕುಮಟಾ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಉತ್ತರ ಕನ್ನಡ ಜಿಲ್ಲೆಯ ಗಂಗಾವಳಿ ಮತ್ತು ಅಘನಾಶಿನಿ ನದಿಗಳನ್ನು ದಾಟಲು ಎಲ್. ಸಿ. ಟಿ. ಎಂಬ ಸಣ್ಣ ಬಾರ್ಜುಗಳ ಅಗತ್ಯತೆಯು ಅರಿವು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಮೇಲೆ ಹೇಳಿದ ನದಿಗಳಿಗೆ ಎಲ್. ಸಿ. ಟಿ. ಗಳನ್ನು ಪೂರೈಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ಈ ಯೋಜನೆಗಳನ್ನು ಮಂಜೂರು ಮಾಡಿ ಕಾರ್ಯಗತಗೊಳಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿ ಇದೆ.

ಅಧ್ಯಕ್ಷರೇ, ಇದರ ಬಗ್ಗೆ ಸಪ್ಲಿಮೆಂಟರಿ ನೋಡಿದರೆ ಬಹುಶಃ ಮಾನ್ಯ ಸದಸ್ಯರಿಗೆ ಅರ್ಥವಾಗ ಬಹುದು ಎಂದು ಹೇಳುತ್ತಿದ್ದೇನೆ.

> '' ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನಲ್ಲಿ ಗಂಗಾವಳಿ ನದಿಯ ಅಡ್ಡಲಾಗಿ '' ಗಂಗಾವಳಿ–ಮಂಜುಗಣಿ '' ನಡುವೆ ಹಾಗೂ ಅಘನಾಶಿನಿ ನದಿಯ ಅಡ್ಡಲಾಗಿ '' ತದಡಿ–ಅಘನಾಶಿನಿ '' ನಡುವೆ ಪ್ರಯಾಣಿಕರನ್ನು ಒಯ್ಯುವ ಸಲುವಾಗಿ ಮಿನಿ ಎಲ್. ಸಿ. ಟಿ. ಗಳನ್ನು ಕಡವು ಸೇವೆಯಲ್ಲಿ ತೊಡಗಿಸುವ ಪ್ರಸ್ತಾಪವು ಸರ್ಕಾರದ ಪರಿಶೀಲನೆ ಯಲ್ಲಿರುವುದು.